ಜೊನ್ನೆ ಎಲ್ಲವೂ ಒಂದೊಂದಾಗಿ ಬಡಿಸುತ್ತ ಬರಲ್ಪಟ್ಟವು. ನಂತರ ಚೌತೆಕಾಯಿ, ಈರುಳ್ಳಿ, ತಾಳ್ಳು. ಮುದ್ದೆ, ಸಾರು. ಕೊನೆದಾಗಿ ಒಂದು ಸಣ್ಣ ಸೌಟಿನಲ್ಲಿ ಅಡುಗೇ ಬಟ್ಟನೇ ಬಾಡಾಕುತ್ತ ದೂರದಲ್ಲಿ ಬರುತ್ತಿದ್ದನು. ಕವಿ ದೂರದಿಂದಲೇ ಬಟ್ಟನ ಅಳತೇ ಸೌಟನ್ನ ಗಮನಿಸಿದನು. ಅಷ್ಟೇನು ಸಂತೋಷವಾಗಲಿಲ್ಲ. ಮೊದಲ ಪಂತಿಯಲ್ವ. ಜನ ನೋಡಿಕೊಂಡು ಹಾಕೋಣ ಎಂದು ಕಿರಿದಾದ ಒಂದು ಸೌಟಿನಲ್ಲಿ ಭರ್ತಿಯಾಗಿ ಹಾಕುತ್ತಿದ್ದನು. ಅವು ನಾಕಾರು ಪೀಸು ಮೀರುತ್ತಿರಲಿಲ್ಲ. ಹೋಗಲಿ ಅಷ್ಟೇ ಬಿದ್ದರೂ ಪರವಾಗಿಲ್ಲ, ಈ ಪಕ್ಕದ ಹುಡುಗರ ಪೀಸುಗಳೂ ಬಿದ್ದರೆ ಬೇಕಾದಷ್ಟೆ ಆಗುತ್ತೆ ಎಂದು ಸಣ್ಣ ಸಮಾಧಾನ ಮಾಡಿಕೊಂಡನು. ಆಕಡೆ ಮೂರನೇ ಪಂತಿಯಲ್ಲಿ ಯಾರೋ ಮೇಲೆದ್ದು 'ಲೇ ರಾಕೇಶ ರಾಕೇಶ' ಅಂತ ಕೂಗುತ್ತಿರುವುದು ಕೇಳಿತು. ಯಾರು ಎಂದು ನೋಡಿದರೆ, ಪಕ್ಕದಲ್ಲಿ ಕೂತಿದ್ದ ಬಾಲಕನ ತಂದೆ ಆಕಡೆ ಕೂತು ಮಗನನ್ನು ತನ್ನ ಬಳಿ ಬರುವಂತೆ ಕರೆಯುತ್ತಿದ್ದನು. ಅಪ್ಪನ ದನಿ ಕೇಳಿದ್ದೆ ಈ ರಾಕೇಶ ಕವಿಯನ್ನೂ ಲೆಕ್ಕಿಸದೆ ಟೇಬಲ್ ಸಂದಿಯಾಸಿ ನುಸಿದು ಓಡಿಬಿಟ್ಟಿತು. ಖಾಲಿಯಾದ ಎಲೆಗೆ ಹಿಂದೆಯೇ ಕಾದಿದ್ದ ಇನ್ನೊಬ್ಬ ಬಂದು ಜಾಗ ಹಿಡಿದುಕೊಂಡನು. ಕವಿಗೆ ಬೆಚ್ಚಿದಂತಾಯಿತು. 'ಥೂ ಥೆರಿ' ಅಂದ್ಕೊಂಡು ಸುಮ್ಮನಾದನು. ಪುಣ್ಯಕ್ಕೆ ಪಕ್ಕದಲ್ಲಿರುವ ಇನ್ನೊಬ್ಬ ಬಾಲಕನನ್ನು ಯಾರೂ ಕರೆಯಲಿಲ್ಲ. ಕವಿಯ ಜೊನ್ನೆಗೂ ಒಂದು ಸೌಟು ಬಾಡು ಬಿದ್ದಿತು. ಅಂತೆಯೇ ಪಕ್ಕದ ಬಾಲಕನ ಜೊನ್ನೆಗೂ. ಅದಾಗಲೇ ತಾಳ್ಮನ್ನು ಗೆಬರಿದ್ದ ಕವಿ, ಬಿದ್ದ ತುಂಡುಗಳನ್ನ ಚೆನ್ನದಂತೆ ನೋಡಿದನು. ಎರಡು ಗಟ್ಟಿ ಪೀಸು, ಇನ್ನೊಂದು ನ್ಯಣ. ಮತ್ತೊಂದು ಮೂಳೆ, ಇನ್ನೊಂದು ಯಂತದೊ ಚೂರು. ಕವಿಗೆ ನಿರಾಶೆಯೇ ಆಯಿತು ತೋರಿಸಿಕೊಳ್ಳಲಿಲ್ಲ. ಪಕ್ಕದ ಬಾಲಕ ಅವನೇನು ಸಣ್ಣವನೆಂದು ಬಡಿಸುವವನು ಏರು ಪೇರೆನು ಮಾಡಲಿಲ್ಲ. ಎಲ್ಲರಿಗೂ ಒಂದೇ ಅಳತೆ. ಹಾಗೆ ನೋಡಿದರೆ ಆ ಬಾಲಕನ ಜೊನ್ನೆಗೆ ಒಂಚೂರು ನೆಗವಾದ ಒಂದು ಸುಮಾರಾದ ತುಂಡು ಬಿದ್ದಿತ್ತು. ಈ ಹುಡುಗ ಎಲ್ಲಿ ತಿಂದಾನು, ಅದೂ ನನ್ನ ಪಾಲೇ ಎಂದು ಸಮಾಧಾನ ಪಟ್ಟುಕೊಂಡು ಕವಿ ಒಂದೊಂದೇ ಮೆಯ್ಯತೊಡಗಿದನು.

ಕವಿಗೆ ತನ್ನ ಎಲೆಯ ಮೇಲಿನ ಗಮನದಷ್ಟೇ ಪಕ್ಕದವರ ಎಲೆಯ ಮೇಲೂ ಇತ್ತು. ಒಬ್ಬೊಬ್ಬರೂ ಕುಕ್ಕಿ ಸೀಪಿ ಮತ್ತೆ ಇಟ್ಟು, ಅದನ್ನೇ ಮತ್ತೊಂದಾವರ್ತಿ ಸೀಪುತ್ತಿದ್ದರು. ಕವಿ ತನ್ನ ಎಲೆಯ ಮೇಲಿನವುಗಳನ್ನೆಲ್ಲ ಬೇಗನೆ ಮುಗಿಸಿಯೇ ಬಿಟ್ಟನು. ಅಕಸ್ಮಾತ್ ಇನ್ನೊಂದಾವರ್ತಿ ಬಾಡು ಹಾಕಿಕೊಂಡು ಬಂದರೆ ಖಾಲಿಯಾಗಿರುವ ನನ್ನ ಜೊನ್ನೆ ನೋಡಿ ಇನ್ನೊಂದೆರಡು ಹೆಚ್ಚಿಗೆ ಉದುರಿಸಿದರೂ ಉದುರಿಸಬಹುದೆಂಬ ಆಕಾಂಕ್ಷೆಯಿಂದ. ಆಕಡೆ ಹೋದ ಬಾಡಿನ ಸೌಟಿನವನು ಮತ್ತೆ ಈ ಕಡೆ ಬಂದಂತೆ ಕಾಣಲಿಲ್ಲ. ಹೋಗ್ಲಿ ಅತ್ತಗೆ ಅಂತ ಪಕ್ಕದ ಬಾಲಕನ ಎಲೆ ನೋಡಿದರೆ ಆತ ತನಗೆ ಹಾಕಿದ್ದ ಚಿಕನ್ ಕಬಾಬ್ ಪೀಸುಗಳನ್ನೂ ತಿಂದು, ಮಟನ್ ತುಂಡುಗಳನ್ನೂ ಮುಗಿಸಿ ಮೂಳೆಯನ್ನೂ ಬಿಡದೆ ಕವರುತ್ತಿದ್ದಾನೆ. ಇವನಿಗಿಂತ ಮುಂಚಿತವಾಗಿ ಬಾಲಕನೇ ತನ್ನ ಎಲೆಯನ್ನು ಖಾಲಿ ಮಾಡಿ 'ಅಣ್ಣೊ ಮುದ್ದೆ ತಗಂಬಾರಣ್ಣೊ' ಅಂತ ಕೂಗುತ್ತಿದ್ದನು. ಕವಿಗೆ ನಾಚಿಕೆಯಾದಂತಾಗಿ ಮತ್ತೊಂದು ಮುದ್ದೆಯನ್ನು ಹಾಕಿಸಿಕೊಂಡು, ತಿಂದಿಟ್ಟಿದ್ದ ತುಂಡುಗಳನ್ನೇ ಮತ್ತೊಮ್ಮೆ ಕರವಿ, ಇನ್ನೊಂಚೂರು ಸಾರು ಬಿಡಿ ಎಂದು ಅದನ್ನೇ ಎರಡು ಮೂರು ಸರ್ತಿ ಕುಡಿದು ಎಲ್ಲರಿಗಿಂತ ಮುಂಚಿತವಾಗಿ ಜುಬ್ಬಾ ಕೊಡವಿಕೊಂಡು ಮೇಲೆದ್ದ. ಪಂತಿ ಬಿಟ್ಟು ಪ್ರತ್ಯೇಕವಾಗಿ ಮೇಲೇಳಬಾರದೆಂಬ ನಿಯಮವಿದ್ದರೂ ಕವಿಗೆ ಏನೋ ಧಾವಂತವಿರಬೇಕೆಂದು ಯಾರೂ ಬಾಯಿ ತೆಗೆಯಲಿಲ್ಲ. 'ಬನ್ನಿ ಸಾರ್ ಎಲಾಡ್ಕೆ ಆಕ್ಕಳಿ' ಅಂತ ಕರುದ್ರು ಕೇಳಿಸ್ಕಂದನಂಗೆ ಕಾರ್ ತಿರುಗಿಸಿಯೇ ಬಿಟ್ಟ. ಕವಿಯ ಸಿಟ್ಟಿನ ವೇಗಕ್ಕೆ ಆ ಕಡೆಯಿಂದ ನೆಗೆದು ಬಂದ ನಾಟಿಕೋಳಿಯೊಂದು ಚಕ್ರಕ್ಕೆ ಸಿಕ್ಕೇ ಬಿಟ್ಟಿತು. ಊಟದ ಮೂಡಿನಲ್ಲಿದ್ದ ಜನ ಯಾರೂ ಇದನ್ನ ಗಮನಿಸಿದಂತೆ ಕಾಣಲಿಲ್ಲ. ಕವಿ ಅನಾಮತ್ ಆ ಕೋಳಿಯನ್ನು ತನ್ನ ಕಾಲಡಿಕಾಕಿಕೊಂಡು ಸ್ಪೀಡ್ ಮಾಡಿದ. ಆ ರಾತ್ರಿ ಕವಿ ಮನೆಯ ಟೆರೇಸ್ ಮೇಲೆ ನಾಟಿಕೋಳಿ ಬೇಯುತ್ತಿತ್ತು. ಅದರ ಘಮಲು ಊರೆಲ್ಲ ಹಬ್ಬಿತ್ತು. ●